## ನಿಮ್ಮೊಡನೆ

# ಶಿಕ್ಷಕರು ಸಿದ್ಧರಿದ್ದಾರೆಯೇ?

ಹಾಗೆ ನೋಡಿದರೆ, ತೆರೆದ ಪುಸ್ತಕ ಪರೀಕ್ಷಾ ಪದ್ಧತಿಯೇ ಹೆಚ್ಚು ಕಠಿಣವಾದದ್ದು. ಪಠ್ಯ ರೂಪಿಸುವುದು, ಮಕ್ಕಳಿಗೆ ಅರ್ಥ ವಿವರಣೆಗಳ ಸಹಿತ ಅದನ್ನು ಕಲಿಸುವುದು, ಪ್ರಶ್ನೆಪತ್ರಿಕೆ ರೂಪಿಸುವುದು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಮೌಲ್ಯಮಾಪನ ಮಾಡುವುದು ಸವಾಲಿನ ಕೆಲಸ.

ಕಲಿಕೆ ಎಂಬುದಕ್ಕೆ ನಾವು ತೀರಾ ಸಂಕುಚಿತ ಅರ್ಥ ಆರೋಪಿಸಿದ್ದೇವೆ. ಕೆಲವರಂತೂ ಉರು ಹೊಡೆಯುವುದನ್ನೇ ಕಲಿಕೆ ಎಂದು ತಪ್ಪಾಗಿ ಭಾವಿಸಿದಂತಿದೆ. ಅಂಥವರಲ್ಲಿ ಸುಶಿಕ್ಷಿತ ಪೋಷಕರು ಮತ್ತು ಶಿಕ್ಷಕರು ಕೂಡ ಸೇರಿದ್ದಾರೆ. ಕಲಿಕೆಯ ಉದ್ದೇಶಕ್ಕೂ ಒಂದು ಚೌಕಟ್ಟು ಹಾಕಿ ಇಟ್ಟಿದ್ದೇವೆ. ಅದರ ಅಂತಿಮ ಗುರಿ ಅಂಕ ಗಳಿಕೆ. ಆ ಮೂಲಕ ಯಾವುದೋ ಒಂದು ಎಂಜಿನಿಯರಿಂಗ್ ಕಾಲೇಜಿನಲ್ಲೋ, ಮೆಡಿಕಲ್ ಕಾಲೇಜಿನಲ್ಲೋ ಸೀಟು ಗಿಟ್ಟಿಸುವುದು; ಆ ಬಳಿಕ ನೌಕರಿ ಹಿಡಿಯುವುದು... ಇಷ್ಟೇ!

ಮಕ್ಕಳನ್ನು ಈ ರೂಢಿಗತ ಜಾಡಿನಲ್ಲಿ ಹೊರಳಾಡುವಂತೆ ಮಾಡಿದ್ದೇವೆ. ಕಲಿಕೆಯ ಖುಷಿಯನ್ನು ಅವರಿಂದ ಕಸಿದುಕೊಂಡಿದ್ದೇವೆ. ಬಾಲ್ಯದ ರಸಮಯ ಗಳಿಗೆಗಳನ್ನು ಇಲ್ಲವಾಗಿಸಿದ್ದೇವೆ. ಮಕ್ಕಳನ್ನು ಪ್ರೀತಿ– ಕಾಳಜಿಯಲ್ಲಿ ಮೀಯಿಸುತ್ತಿದ್ದೇವೆ, ಅವರ ಭವಿಷ್ಯ 'ಬಂಗಾರ'ವಾಗಿಸಲು ಶ್ರಮಿಸುತ್ತಿದ್ದೇವೆ ಎಂದು ಭಾವಿಸಿಕೊಂಡು ಅವರನ್ನು 'ಪಂಜರದ ಗಿಳಿ'ಗಳಂತೆ ಮಾಡಿದ್ದೇವೆ. 'ಗಿಳಿಪಾಠ'ವನ್ನೇ ಓದು– ಕಲಿಕೆ ಎಂದು ಭ್ರಮಿಸಿದ್ದೇವೆ. ವಿಪರ್ಯಾಸ ಎಂದರೆ ಅದೇ ಸಾಮಾಜಿಕ ಮೌಲ್ಯ ಎಂಬಂತಾಗಿದೆ.


ಇನ್ನು ಪರೀಕ್ಷೆಯ ವಿಷಯಕ್ಕೆ ಬಂದರೆ ಅಬ್ಬಬ್ಬಾ ಎಂತಹ ಒತ್ತಡ! ಮಕ್ಕಳಲ್ಲೂ ಒತ್ತಡ, ಪೋಷಕರಲ್ಲೂ ಒತ್ತಡ, ಅಧ್ಯಾಪಕರಲ್ಲೂ ಒತ್ತಡ! ಹೆಣ್ಣುಮಗಳೊಬ್ಬಳು ಪಿಯುಸಿ ಕಲಿಯಲು ಪ್ರತಿಷ್ಠಿತ ಕಾಲೇಜೊಂದಕ್ಕೆ ಸೇರಿದ್ದಳು. ಕಾಲೇಜಿನ ಹಾಸ್ಟೆಲ್‌ನಲ್ಲೇ ವಾಸ. ರಜೆಯಲ್ಲಿ ಮನೆಗೆ ಬಂದಿದ್ದಾಗ ಮಾತಿಗೆ ಸಿಕ್ಕಿದಳು. ಕುತೂಹಲಕ್ಕೆ 'ಹೇಗಿದೆ ಕಾಲೇಜು, ಓದು?' ಎಂದು ಕೇಳಿದೆ. 'ಅಯ್ಯೋ, ಏನಿದೆ ಅಂಕಲ್! ಬೆಳಿಗ್ಗೆ ಎದ್ದು ವಾಷ್‌ರೂಮ್‌ಗೆ ಹೋಗುವಲ್ಲಿಂದಲೇ ಶುರು... ಉರು ಹೊಡಿ ಉರು ಹೊಡಿ. ರಾತ್ರಿ ಹಾಸಿಗೆ ಹೋಗುವವರೆಗೂ ಅದೇ ಜಪ...' ಎಂದು ಒಂದೇ ವಾಕ್ಯದಲ್ಲಿ ಎಲ್ಲವನ್ನೂ ಹೇಳಿ ಮುಗಿಸಿದಳು.

ಇಂತಹ ಭಯ, ಒತ್ತಡಗಳನ್ನು ಅರಿತು, ನಿವಾರಣೋಪಾಯವಾಗಿ ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎನ್.ಮಹೇಶ್ ಅವರು 'ತೆರೆದ ಪುಸ್ತಕ ಪರೀಕ್ಷೆ'ಯ (**Open book exam**) ಬಗ್ಗೆ ಪ್ರಸ್ತಾಪಿಸಿದ್ದು, ಅದೀಗ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಎಡೆಮಾಡಿಕೊಟ್ಟಿದೆ. ಇದರ ಸಾಧ್ಯಾಸಾಧ್ಯತೆಗಳ ಬಗ್ಗೆ ಗಂಭೀರವಾದ ಚರ್ಚೆ ಆಗಬೇಕಾದುದು ಅಗತ್ಯ. ಆದರೆ ಪುಸ್ತಕ ನೋಡಿ ಪರೀಕ್ಷೆ ಬರೆಯುವುದರಿಂದ ನಮ್ಮ ಶೈಕ್ಷಣಿಕ ಗುಣಮಟ್ಟ ಕುಸಿದುಬೀಳುತ್ತದೆ ಎಂದು ಕೆಲವರು ಆತಂಕ ವ್ಯಕ್ತಪಡಿಸಿದ್ದಾರೆ. ಆ ಮಟ್ಟಿಗೆ ಆತಂಕಪಡುವ ಅಗತ್ಯವೇನೂ ಇಲ್ಲ. ಈ ಬಗೆಯ ಪರೀಕ್ಷೆ ಹೊಸತೇನಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಅದು ಈಗಾಗಲೇ ಜಾರಿಯಲ್ಲಿದೆ. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಭಾಗವಾಗಿದೆ. ಇಲಾಖಾ ಪರೀಕ್ಷೆಗಳಲ್ಲಿ ಇದೇ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ. ಕೆಲವು ಎಂಜಿನಿಯರಿಂಗ್ ಕಾಲೇಜುಗಳು ಕೂಡ ಈ ವಿಧಾನವನ್ನು ಅಳವಡಿಸಿಕೊಂಡಿವೆ. ಹೀಗಾಗಿ ಎಲ್ಲೂ ಒರೆಗೆ ಹಚ್ಚದ ಕ್ರಾಂತಿಕಾರಕ ವಿಚಾರ ಎಂಬಂತೆ ಈ ಬಗ್ಗೆ ತಳಮಳ ಪಡುವುದು ತರವಲ್ಲ.

ಹಾಗೆ ನೋಡಿದರೆ, ತೆರೆದ ಪುಸ್ತಕ ಪರೀಕ್ಷಾ ಪದ್ಧತಿಯೇ ಹೆಚ್ಚು ಕಠಿಣವಾದದ್ದು. ಪಠ್ಯ ರೂಪಿಸುವುದು, ಮಕ್ಕಳಿಗೆ ಅರ್ಥ ವಿವರಣೆಗಳ ಸಹಿತ ಅದನ್ನು ಕಲಿಸುವುದು, ಪ್ರಶ್ನೆಪತ್ರಿಕೆ ರೂಪಿಸುವುದು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಮೌಲ್ಯಮಾಪನ ಮಾಡುವುದು ಸವಾಲಿನ ಕೆಲಸ. ಯಾರೋ ಸಿದ್ಧಪಡಿಸಿಟ್ಟ ಗೈಡ್ ಹಿಡಿದು ಕಂಠಪಾಠ ಮಾಡುವುದು ಮತ್ತು ಉತ್ತರ ಪತ್ರಿಕೆಯಲ್ಲಿ ಅದನ್ನು ಯಥಾರೀತಿ ಇಳಿಸುವುದು ಸುಲಭ. ಪಠ್ಯಪುಸ್ತಕ ಓದಿ ಅರ್ಥ ಮಾಡಿಕೊಂಡು ಅಲ್ಲಿ ಕಲಿತದ್ದನ್ನು ಸೂಕ್ತ ರೀತಿಯಲ್ಲಿ ಅನ್ವಯಿಸಿ ಬರೆಯುವುದು ತ್ರಾಸದ ಕೆಲಸ. ಅದಕ್ಕೆ ವಿಶೇಷ ಕೌಶಲ ಬೇಕು. ಈಗಿರುವ ಪರೀಕ್ಷಾ ಪದ್ಧತಿಯು ನಮ್ಮ ನೆನಪಿನ ಶಕ್ತಿಗೆ ಪರೀಕ್ಷೆಯಾದರೆ, ಓಪನ್ ಬುಕ್ ಎಕ್ಸಾಮ್ ನಮ್ಮ ವಿಶ್ಲೇಷಣಾ ಸಾಮರ್ಥ್ಯವನ್ನು ಒರೆಗೆ ಹಚ್ಚುತ್ತದೆ. ವಿದ್ಯಾರ್ಥಿಯಲ್ಲಿ ಚಿಂತನೆಯನ್ನು ಉದ್ದೀಪಿಸುತ್ತದೆ. ಭಿನ್ನವಾಗಿ ಯೋಚಿಸುವಂತೆ ಮಾಡುತ್ತದೆ.

ಆದರೆ ಇಂತಹದೊಂದು ಬದಲಾವಣೆಗೆ ನಮ್ಮ ಶಿಕ್ಷಕ ಸಮುದಾಯ ಸಿದ್ಧವಿದೆಯೇ ಎಂಬ ಪ್ರಶ್ನೆಯನ್ನು ಮೊದಲು ಕೇಳಿಕೊಳ್ಳಬೇಕಿದೆ. ಮಕ್ಕಳನ್ನು ಹೇಗಾದರೂ ಅಣಿಗೊಳಿಸಬಹುದು. ಆದರೆ ಶಿಕ್ಷಕರನ್ನು ಸನ್ನದ್ಧಗೊಳಿಸುವುದು ದೊಡ್ಡ ಸವಾಲು. ಇದರ ಸಾಧಕ– ಬಾಧಕ ಕುರಿತು ವಿಷಯ ತಜ್ಞರು ಇನ್ನಷ್ಟು ಮಂಥನ ನಡೆಸಲಿ. ಬದಲಾವಣೆ ಕಾಲದ ಅಗತ್ಯ. ಅದಕ್ಕೆ ಮಕ್ಕಳೂ ತೆರೆದುಕೊಳ್ಳಲಿ.

**■ ಎನ್. ಉದಯಕುಮಾರ್**



ಈಶ್ವರ್